ಅ) ಧಾರವಾಡ ಜಿಲ್ಲಾ ಗಿರಣಿಗಳಲ್ಲಿರುವ ಕಾರ್ಮಿಕ ಕಲ್ಯಾಣ ಅಧಿಕಾರಿಗಳ ಸಂಖ್ಯೆ ಎಷ್ಟು? ಹಾಗೂ ಅವರ ವಿದ್ಯಾರ್ಹತೆ ಬಗ್ಗೆ ಸರ್ಕಾರ ಗಮನವಿರಿಸಿದೆಯೇ; ಅಂಥ ಕಾರ್ಮಿಕ ಕಲ್ಯಾಣ ಅಧಿಕಾರಿಗಳು ಸರ್ಕಾರದೊಂದಿಗೆ ನೇರವಾಗಿ ಕಾರ್ಮಿಕರ ಕುರಿತು ವ್ಯವಹರಿಸಲು ಸಾಧ್ಯವೇ, ಸಾಧ್ಯವಿದ್ದಲ್ಲಿ ಕಳೆದೆರಡು ವರ್ಷಗಳಿಂದ ಪಡೆದ ವರದಿಯ ವಿವರ ನೀಡುವುದು.

ಆ) ಕಾರ್ಖಾನೆಗಳಲ್ಲಿ ಬಾಲ ಕಾರ್ಮಿಕರು ದುಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) ಸರ್ಕಾರದವತಿಯಿಂದ ಧಾರವಾಡ ಜಿಲ್ಲೆಯಲ್ಲಿ ಟ್ರೈಸಂ ಯೋಜನೆಯಡಿಯಲ್ಲಿ ಯಾವುದೇ ಉದ್ಯೋಗ ಇರುವುದಿಲ್ಲ. ಆದರೆ 1990-91ರಿಂದ 1994-95ನೇ ಸಾಲಿನ ಅವಧಿಯಲ್ಲಿ 1804 ಯುವಜನರು ಸ್ವಯಂ ಉದ್ಯೋಗಿಗಳಾಗಿರುತ್ತಾರೆ.

1990-91ರಿಂದ 1994-95ನೇ ಸಾಲಿನ ಅವಧಿಯಲ್ಲಿ ಟ್ರೈಸಂ ಯೋಜನೆಯಡಿ ಒಟ್ಟು 5055 ಯುವಜನರು ಧಾರವಾಡ ಜಿಲ್ಲೆಯಲ್ಲಿ ವಿವಿಧ ವೃತ್ತಿಗಳಲ್ಲಿ ತರಬೇತಿ ಪ್ರಯೋಜನ ಹೊಂದಿರುತ್ತಾರೆ.

1990-91ರಿಂದ 1994-95ನೇ ಸಾಲಿನ ಅವಧಿಯಲ್ಲಿ ಟ್ರೈಸಂ ತರಬೇತಿಗಾಗಿ ಧಾರವಾಡ ಜಿಲ್ಲೆಯಲ್ಲಿ 148.782 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಆ) 13 ಜನ ಕಾರ್ಮಿಕ ಕಲ್ಯಾಣ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ. ಹೌದು.

ಕಾರ್ಮಿಕ ಕಲ್ಯಾಣ ಅಧಿಕಾರಿಗಳು ನೇರವಾಗಿ ಸರ್ಕಾರವನ್ನು ಸಂಪರ್ಕಿಸಲು ಸಾಧ್ಯವಿರುವುದಿಲ್ಲ. ಆದ್ದರಿಂದ ವರದಿ ವಿವರ ಒದಗಿಸುವ ಬಗ್ಗೆ ಉದ್ಭವಿಸುವುದಿಲ್ಲ.

ಇ) ಈ ತರಹದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ರಾಜ್ಯದಲ್ಲಿರುವ ಗೋಮಾಳ ಮತ್ತು ಹುಲ್ಲುಗಾವಲು ಕ್ಷೇತ್ರ

297 - ಶ್ರೀ ಯು.ಬಿ. ಬಣಕಾರ (ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗೋಮಾಳ ಹಾಗೂ ಹುಲ್ಲುಗಾವಲುಗಳ ಕ್ಷೇತ್ರವೆಷ್ಟು? (ತಾಲ್ಲೂಕುವಾರು ವಿವರ ನೀಡಬೇಕು)

ಆ) ಈಗಿರುವ ಗೋಮಾಳ ಹಾಗೂ ಹುಲ್ಲುಗಾವಲು ಕ್ಷೇತ್ರ ಆಯಾ ತಾಲ್ಲೂಕುಗಳ ಜಾನುವಾರಗಳ ಸಂಖ್ಯೆಗೆ ಅನುಗುಣವಾಗುತ್ತದೆಯೇ?

ಇ) ಕಡಿಮೆಯಾಗುತ್ತಿದ್ದರೆ, ಗ್ರಾಮಗಳಲ್ಲಿಯ ದನಕರು, ಕುರಿ, ಎಮ್ಮೆಗಳು, ಮೇಯಲು ಸರಕಾರ ಮಾಡುವ ವ್ಯವಸ್ಥೆಗಳೇನು?

ಈ) ಗೋಮಾಳ ಹಾಗೂ ಹುಲ್ಲುಗಾವಲಿನ ಜಮೀನಿನಲ್ಲಿ ಅಕ್ರಮ ಸಾಗುವಳಿ ಮಾಡುವವರ ಮೇಲೆ ಸರಕಾರ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಒಟ್ಟು ಕ್ಷೇತ್ರ 21,93,465 ಎಕರೆಗಳು (ತಾಲ್ಲೂಕುವಾರು ಮಾಹಿತಿ ಲಭ್ಯವಿಲ್ಲ ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ)

ಆ) ಇಲ್ಲ

ಇ) ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(2)ರನ್ವಯ ಗೋಮಾಳ ಜಮೀನನ್ನು ಮಿತಿಗಿತ ಕಡಿಮೆ ಇರುವ ಗ್ರಾಮಗಳಲ್ಲಿ ಸುತ್ತಮುತ್ತಲಿರುವ ಅರಣ್ಯ ಜಮೀನುಗಳಲ್ಲಿ ಜಾನುವಾರುಗಳು ಮೇಯಲು ಅವಕಾಶ ನೀಡಲಾಗಿರುತ್ತದೆ.

ಈ) 1991ರ ನಂತರ ಆದ ಗೋಮಾಳ ಜಮೀನುಗಳ ಒತ್ತುವರಿಗಳನ್ನು ಒಕ್ಕಲೆಬ್ಬಿಸಲು ಈಗಾಗಲೇ ಎಲ್ಲಾ ಕಂದಾಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನವನ್ನು ನೀಡಲಾಗಿದೆ.

ಅನುಬಂಧ

ರಾಜ್ಯದಲ್ಲಿರುವ ಗೋಮಾಳ ಜಮೀನಿನ (ವಿಸ್ತೀರ್ಣ) ವಿವರ

ಕ್ರ.ಸಂ.	ಜಿಲ್ಲೆ	ವಿಸ್ತೀರ್ಣ (ಎಕರೆಗಳಲ್ಲಿ)
1.	ಬೆಂಗಳೂರು (ನಗರ)	ಶೂನ್ಯ
2.	ಬೆಂಗಳೂರು (ಗ್ರಾಮಾಂತರ)	1,34,244-22
3.	ತುಮಕೂರು	1,49,177-35
4.	ಕೋಲಾರ	2,09,095-18
5.	ಶಿವಮೊಗ್ಗ	4,74,866-00
6.	ಚಿತ್ರದುರ್ಗ	2,01,627-15
7.	ಮೈಸೂರು	61,430-16
8.	ಮಂಡ್ಯ	1,10,978-16
9.	ಚಿಕ್ಕಮಗಳೂರು	1,60,593-15
10.	ಕೊಡಗು	ಶೂನ್ಯ
11.	ದಕ್ಷಿಣ ಕನ್ನಡ	56,658-700
12.	ಹಾಸನ	1,49,000-00
13.	ಬೆಳಗಾಂ	45,557-00
14.	ಕಾರವಾರ	4,837-21
15.	ಬಿಜಾಪುರ	32,793-70
16.	ಧಾರವಾಡ	69,189-08
17.	ಗುಲ್ಬರ್ಗಾ	1,27,284-38
18.	ಬೀದರ್	95,584-10
19.	ಬಳ್ಳಾರಿ	1,160-68
20.	ರಾಯಚೂರು	49,389-00
	ಒಟ್ಟು	21,93,465-22